

ಎಡದಿಂದ ಬಲಕ್ಕೆ:

1.ತೆರೆಮರೆಯಲ್ಲಿದ್ದ ವಸ್ತುಗಳೆಲ್ಲ ಚೆಲ್ಲಾಪಿಲ್ಲಿ 4
3.ಆ ಭಿಕ್ಷುಕನ ಜೋಳಿಗೆಯಲ್ಲಿ ಬರೀ ವಸ್ತ್ರ 3
4.ರಂಜಿಸಲು ಕಾದಿರಿಸಿದ್ದ ಭಾರೀ ಚಲುಮೆ ಹಿಂದುಮುಂದು 3
6.ಕಳೆ ಕೀಳಲು ಬಂದಾತನ ಜೊತೆಗೆ ಇದೆಂಥ ಸ್ನೇಹ? 4
7.ರಾಮಭಕ್ತರು ತೊಟ್ಟು ಬಂದದ್ದು ನೆತ್ತರಿನ ಬಣ್ಣದ ಬಟ್ಟೆ 4
8.ಅಲಂಕರಣವನ್ನು ಮಾಡಲು ಅಲ್ಲಿದೆ ಎಲ್ಲ ಬಗೆಯ ಸೌಕರ್ಯ 4
10. ಬೇರೆ ದಾರಿ ಕಾಣದ್ದರಿಂದ ಇಂಥ ಸಾಲದ ಹೊರೆ 4
12. ಕೋಶ ತೆಗೆದು ಗಂಟು ಕಟ್ಟಿದ್ದು ಹತ್ತು ಸಾವಿರ ಲಕ್ಷ 4
14. ಅಲ್ಲಿ ವಿರಾಜಮಾನನಾಗಿದ್ದಾನೆ ನೋಡಿ ಅಡವಿಯ ಅರಸ 4
16. ಮಹಾರಾಣಿಯಾಗಲು ತಕ್ಕ ಸುಂದರಿ ಈಕೆ 3
17. ಒಲ್ಲೆನೆನುವ ಮಾತೇ ಇಲ್ಲ; ಆತ ಅಜ್ಞಾತವಾಸದಲ್ಲಿದ್ದ ಭೀಮಸೇನ 3
18. ಸುಲಭದ್ದಲ್ಲದ್ದಕ್ಕೆ ಕೈ ಹಚ್ಚಿದರೆ ಆಗುವುದೇ ಹೀಗೆ 4

ಮೇಲಿಂದ ಕೆಳಕ್ಕೆ:

1. ಈ ಕಟ್ಟಡದ ತಳಕ್ಕೆ ಹೇಗಿದೆ ಸಹಿಸುವ ಶಕ್ತಿ? 3
2. ರಾಜ್ಯವನ್ನೇ ಆವರಿಸಿದ್ದ ರೋಗದ ಜೊತೆಗಾರ 3
3. ಭಜನೆಯ ಕಾಲದಲ್ಲಿ ಪ್ರದರ್ಶನಗೊಂಡಿತ್ತು ಮನುಷ್ಯರ ಶಕ್ತಿ 4
5. ಕನ್ಯಾ ದಾನ ಮಾಡಲೂ ಶಾಸನ ಬದ್ಧ ನಿಯಮ ಇದೆ 3
7. ಹರಿಹರದ ಮಾರ್ಗದಲ್ಲಿ ಸಾಗಲು ಅಪ್ಪಣೆ ಚೀಟಿ ಬೇಕೇ? 4
9. ಸ್ಥಾನ ಪಲ್ಲಟ ಮಾಡಹೋದಾಗ ನಡೆದಿದ್ದು ಭಾರೀ ಹೊಡೆದಾಟ 4
11. ಸಭಾಸದರ ಕೈ ಹಿಡಿದವನದು ಸೂರ್ಯನದೇ ಹೆಸರು 3
13. ಶತಕ ಮುಟ್ಟುವ ವೇಳೆಗೆ ಚಳಿಯ ಸಮಯ ಬಂದಿತ್ತು 4
14. ಕುಣಿಯುತ್ತಿರುವವರ ನಡುವೆ ಒಬ್ಬ ವ್ಯಾಪಾರಿಯೂ ಇದ್ದಾನೆ 3
15. ವಜ್ರದ ರಾಶಿಯೇಇದ್ದರೂ ಬಾರದಿರುವನೇ ಯಮ? 3

## 31-12-2020 ಉತ್ತರಗಳು

ಎಡದಿಂದ ಬಲಕ್ಕೆ:

1.ಅಸಮ್ಮತ 3.ಶರಧಿ 5.ರುಧಿರ 6. ಕಡಿವಾಣ 7. ಸಕಲ 9. ಪಾತಕ 11. ತೆಪರ 13. ರಮಿಸು 15. ಆಸುಪಾಸು 17. ನಡುಕ 18. ಮರ್ದನ 19. ರಜಾದಿನ

ಮೇಲಿಂದ ಕೆಳಕ್ಕೆ:

1.ಅಧಿಕ 2. ತರುಣ 3. ಶತಕ 5. ರಹಿತ 7. ಸಮಾನತೆ 8. ಲಕ್ಷಾಂತರ 9. ಪಾರಾವಾರ 10. ಕತ್ತರಿಸು 12. ಪತನ 14. ಮಿಲನ 15. ಆಕರ 16. ಸುಮನ

ಪ್ರಶ್ನಾಂಕಣ

# ಮಹಾ ಗೋಡೆ: ಏಕೆ ಅದ್ಭುತ?

ಚೀನಾ ದೇಶದ ಉತ್ತರ ಭಾಗದಲ್ಲಿ ಪುರಾತನ ಚೀನೀ ರಾಜ್ಯಗಳ ಅರಸರು ಅಲ್ಲಲ್ಲಿ ನಿರ್ಮಿಸಿ ಕಡೆಗೆ ಅವೆಲ್ಲ ಭಾಗಗಳು ಒಟ್ಟುಗೂಡಿರುವ ಕೋಟೆಗೋಡೆಗಳ ಸರಣಿಯೇ 'ಚೀನಾದ ಮಹಾಗೋಡೆ'. ಕ್ರಿಸ್ತ ಪೂರ್ವ ಏಳನೆಯ ಶತಮಾನದ ವೇಳೆಗೇ ಆರಂಭಗೊಂಡು ಅಲ್ಲಲ್ಲಿ ತಲೆ ಎತ್ತಿದ್ದ ಈ ಕೋಟೆ ಭಾಗಗಳನ್ನೆಲ್ಲ ಪ್ರಾಚೀನ ಚೀನಾದ ಪ್ರಥಮ ಚಕ್ರವರ್ತಿ 'ಚಿನ್ ಶೀ ಹ್ವಾಂಗ್ ಡೀ' (ಕ್ರಿ.ಪೂ. 221 207) ಒಟ್ಟುಗೂಡಿಸಿದ (ತನ್ನ ಅಪರ ಬದುಕಿಗಾಗಿ ವಿಶ್ವ ಪ್ರಸಿದ್ಧ 'ಮೃತ್ತಿಕೆಯ ಸೇನೆ'ಯನ್ನು ಚಿತ್ರ 3 ಸಿದ್ಧಪಡಿಸಿಕೊಂಡವನೂ ಈತನೇ). ಅಲ್ಲಿಂದ ಸುಮಾರು ಹದಿನೈದು ಶತಮಾನಗಳ ನಂತರ ಆಳ್ವಿಕೆಗೆ ಬಂದ 'ಮಿಂಗ್ ವಂಶ'ದ ಅರಸರು ಕ್ರಿಸ್ತಶಕ 1368 ರಿಂದ 1644 ರ ವರೆಗೆ 276 ವರ್ಷಗಳ ಕಾಲ ಇದೇ ಕೋಟೆಯನ್ನು ವಿಸ್ತರಿಸಿ ಪೂರ್ಣಗೊಳಿಸಿದರು.

ಹಾಗೆ ಸಮೀಪ ಒಂದು ಸಾವಿರ ವರ್ಷಗಳ ನಿರ್ಮಾಣದ ಇತಿಹಾಸವನ್ನು ಹೊಂದಿರುವ ಈ ಮಹಾ ಗೋಡೆಯ ಒಟ್ಟು ಉದ್ದ 21,196 ಕಿಲೋಮೀಟರ್! ಬಯಲುಗಳಲ್ಲಿ ನಡೆದು, ಬೆಟ್ಟ ಗುಡ್ಡಗಳನ್ನು ಹತ್ತಿ, ಕಣಿವೆ ಕೊರಕಲುಗಳಲ್ಲಿ ಇಳಿದು ಸಾಗಿರುವ ಈ ಮಹಾ ಗೋಡೆಯಲ್ಲಿ (ಚಿತ್ರ2) 'ಮಿಂಗ್ ವಂಶ'ದ ಅರಸರು ನಿರ್ಮಿಸಿರುವ ಭಾಗದ ಉದ್ದ 8850 ಕಿ.ಮೀ. ಅತ್ಯಂತ ಭವ್ಯವಾಗಿ, ಇಂದಿಗೂ ಅತ್ಯಂತ ದೃಢವಾಗಿ ನಿಂತಿರುವ ಭಾಗ ಇದೇ ( ಚಿತ್ರ1). ಉತ್ತರ ದಿಕ್ಕಿನ ಕಡೆಯಿಂದ ಬರುತ್ತಿದ್ದ ಅಲೆಮಾರಿ ದಾಳಿಕೋರರನ್ನು ತಡೆಗಟ್ಟುವುದು ಈ ಮಹಾ ಗೋಡೆಯ ಮೂಲ ಉದ್ದೇಶವಾಗಿತ್ತು. ಆ ಉದ್ದೇಶ ಸಫಲವಾಗದಿದ್ದರೂ 'ಮಾನವೇತಿಹಾಸದ ಒಂದು ಅತ್ಯದ್ಭುತ ವಾಸ್ತು ನಿರ್ಮಿತಿ' ಎಂದೇ ಈ ಗೋಡೆ ವಿಶ್ವ ವಿಖ್ಯಾತ. 1987 ರಲ್ಲಿ ಯುನೆಸ್ಕೋದ 'ವಿಶ್ವ ಪರಂಪರೆಯ ತಾಣಗಳ ಪಟ್ಟಿ'ಯಲ್ಲಿ ಸ್ಥಾನ ಪಡೆದು ಪುರಸ್ಕೃತ. ಪರಮ ಸೋಜಿಗದ ಈ ನಿರ್ಮಿತಿ ಈಗಲೂ ಚೀನಾದ ಅತ್ಯಂತ ಪ್ರಸಿದ್ಧವಾದ ಒಂದು ಪ್ರವಾಸೀ ಆಕರ್ಷಣೆ.




ಚೀನಾದ ಮಹಾಗೋಡೆ ಉದ್ದದಲ್ಲಷ್ಟೇ ಅತ್ಯದ್ಭುತ ಅಲ್ಲ. ಈ ಕೋಟೆ ಗೋಡೆಯ ತಳದ ಸರಾಸರಿ ಅಗಲ 30 ಅಡಿ; ಎತ್ತರ 15 ರಿಂದ 30 ಅಡಿ; ಗೋಡೆಯ ಮೇಲ್ಭಾಗದ ಅಗಲ ಗರಿಷ್ಠ 30 ಅಡಿ. ಕೋಟೆಯ ಉದ್ದಕ್ಕೂ ಅಲ್ಲಲ್ಲಿ 12 ಅಡಿ ಎತ್ತರದ 'ಪಹರೆ ಶಿಖರ'ಗಳು; ಜೊತೆಗೆ ಸೈನಿಕ ಶಿಬಿರಗಳು ಕೂಡ.

ಹಾಗೆಲ್ಲ ಇದ್ದರೂ, ಮಹಾ ಗೋಡೆಯ ನಿರ್ಮಾಣಕ್ಕೆ ಬಳಸಲಾಗಿರುವ ಸಾಮಗ್ರಿಗಳು ಕಲ್ಲು, ಸುಟ್ಟ ಇಟ್ಟಿಗೆ ಮತ್ತು ಮಣ್ಣು. ಸೈನಿಕರು, ಕೈದಿಗಳು ಮತ್ತು ಸಾಮಾನ್ಯ ಜನ.. ಎಲ್ಲರೂ ಸೇರಿ ನಿರ್ಮಾಣ ನಡೆಸಿದವರ ಒಟ್ಟು ಸಂಖ್ಯೆ ಮಿಲಿಯಾಂತರ. ಗೋಡೆಯ ನಿರ್ಮಾಣ ನಡೆಯುತ್ತಿದ್ದಾಗಲೇ ಮೃತರಾದ ಕೆಲಸಗಾರರ ಸಂಖ್ಯೆಯೇ ಸುಮಾರು ಒಂದು ದಶಲಕ್ಷ. ಹಾಗೆ ಪ್ರಾಣ ಬಿಟ್ಟ ಕೆಲಸಗಾರರೆಲ್ಲ ಗೋಡೆಯೊಳಕ್ಕೇ ಸಮಾಧಿ ಮಾಡಲಾಗಿದೆ! ಹಾಗಾಗಿಯೇ ಚೀನಾದ ಮಹಾಗೋಡೆ 'ಜಗತ್ತಿನ ಅತ್ಯಂತ ಉದ್ದದ ಗೋರಿ' ಎಂದೂ ಕುಖ್ಯಾತ.

■ ಎನ್. ವಾಸುದೇವ್